
# ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2550/ಶ್ರೀ ಕ್ರೋಧಿ ನಾಮ ಸಂವತ್ಸರ

ಪುಟ : ೪ ಸಂಪುಟ : ೭೦ ಸಂಚಿಕೆ : ೧೦

**15-10-2024 ಆಶ್ವಯುಜ ಮಾಸ : ಶುಕ್ಲ ಪಕ್ಷ ಮಂಗಳವಾರ**

RNI No. 13248/57-POSTEL REGD No. KA/SK/SMG 198/2024-26

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ


ಶ್ರೀ ಕ್ಷೇತ್ರ ಹೊಂಬುಜ



ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ





ಜಗನ್ಮಾತೆ ಶ್ರೀ ಪದ್ಮಾವತಿ ದೇವಿ

ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ

## ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು

**ಶುಭಾಶೀರ್ವಚನ** ಶ್ರೀ ಕ್ಷೇತ್ರ ಹೊಂಬುಜ

## 'ನಿರಂತರ ಪ್ರಯತ್ನದಿಂದ ಸಫಲತೆ'

ಪ್ರತಿಯೊಬ್ಬ ಮನುಷ್ಯನು ಜೀವನದಲ್ಲಿ ಏನಾದರೂ ಸಾಧಿಸಲೇಬೇಕೆಂದು ಸತತ ಪ್ರಯತ್ನದಲ್ಲಿರುತ್ತಾನೆ. ನಾನಾ ಪ್ರಕಾರದ ಸಾಹಸಗಳನ್ನು ಮಾಡುತ್ತಾ ಗುರಿಯನ್ನು ತಲುಪುವಲ್ಲಿ ಸಾಗುತ್ತಾನೆ. ಪ್ರತಿ ಪ್ರಯತ್ನದಲ್ಲಿ ಯಶಸ್ಸನ್ನು ಗಳಿಸಲು ಸಾಧ್ಯವಾಗದೇ ಇದ್ದರು ನಿರಾಶನಾಗಬಾರದು ಅಷ್ಟೆ.

**ಧೈರ್ಯಂ ಸರ್ವತ್ರ ಸಾಧನಮ್ ।** ಎಂದೇಳುವಂತೆ ಧೈರ್ಯವಾಗಿ ಗುರಿಯೆಡೆಗೆ ಸಾಗಬೇಕು.

**ಪ್ರಯತ್ನಃ ಸುಗುಣಾನಾಂ ಚ ಮಹತ್ತಾಂಚಮಹದ್‌ಬಲಂ।**
**ನ ಲಕ್ಷ್ಯಂ ನಾತಿವರ್ತಂತೇ ಪ್ರಯತ್ನೇನ ಸಮನ್ವಿತಾಃ ॥**

ಅಂದರೇ ಮಹಾನ್ ಮತ್ತು ಗುಣಿ (ಸಜ್ಜನ) ಜನರ ಪ್ರಯತ್ನವೇ ದೊಡ್ಡ ಬಲವಾಗಿದೆ. ಒಂದು ವೇಳೆ ಅವರು ನಿರಂತರ ಪ್ರಯಾಸದಲ್ಲಿ ಇದ್ದರೆ ಯಾವುದೇ ಗುರಿಯು ಸುಲಭವಾಗುತ್ತದೆ. ಆತ್ಮ ವಿಶ್ವಾಸವನ್ನು ಸದಾ ಇಟ್ಟುಕೊಳ್ಳಬೇಕು.

ಒಂದೂರಲ್ಲಿ ಒಬ್ಬ ರಾಜನು ತನ್ನ ಜೀವಿತದಲ್ಲಿ ಒಂದು ಸುಂದರವಾದ ದೇವರ ವಿಗ್ರಹ ಮಾಡಿಸಬೇಕೆಂದು ಆಶಿಸುತ್ತಾನೆ. ಅದರಂತೆ ಮಂತ್ರಿಗಳು ಒಬ್ಬ ಪ್ರಸಿದ್ಧ ಶಿಲ್ಪಿಯನ್ನು ಕರೆದು ಮೂರ್ತಿ ಮಾಡಲು ಆದೇಶಿಸಿ 50 ಸ್ವರ್ಣ ಮುದ್ರೆಗಳನ್ನು ಕೊಟ್ಟು ಕಳಿಸುತ್ತಾರೆ.

ಶಿಲ್ಪಿಯು ಒಂದು ಚೆನ್ನಾಗಿರುವ ಶಿಲೆಯನ್ನು ಹುಡುಕಿ ಕೆತ್ತನೆ ಕಾರ್ಯವನ್ನು ಆರಂಭಿಸುತ್ತಾನೆ. ಶಿಲೆಯ ಮೇಲೆ ಆಕೃತಿ ರಚಿಸಿ ಕಲ್ಲು ಕೆತ್ತಲು ಅನೇಕ ಬಾರಿ ಉಳಿಯಲ್ಲಿ ಪ್ರಯತ್ನಿಸುತ್ತಾನೆ. ಆದರೆ ಕಲ್ಲಿನ ಸ್ವಲ್ಪವು ಚಕ್ಕೆ ಏಳುವುದಿಲ್ಲ. ಶಿಲ್ಪಿ ಬೇಸತ್ತು ಮಂತ್ರಿಗಳ ಮುಂದೆ ಸೋಲೊಪ್ಪಿಕೊಳ್ಳುತ್ತಾನೆ. ಮಂತ್ರಿ ಮತ್ತೊಬ್ಬ ಊರಿನ ಸಾಧಾರಣ ಶಿಲ್ಪಿಯನ್ನು ಕರೆದು ಮೂರ್ತಿಯ ಜವಾಬ್ದಾರಿಯನ್ನು ಕೊಡುತ್ತಾನೆ. ಅಂತೆ ಶಿಲ್ಪಿಯು ಒಂದು ಏಟು ಕಲ್ಲಿಗೆ ಒಡೆಯುತ್ತಲೇ ಕಲ್ಲು ಸೀಳುತ್ತದೆ. ಅಲ್ಲೇ ಇದ್ದ ಹಿಂದಿನ ಶಿಲ್ಪಿಯು ಆಶ್ಚರ್ಯ ಪಡುತ್ತಾನೆ. ತನ್ನ ತಪ್ಪಿನ ಅರಿವಾಗುತ್ತದೆ.

ಅನೇಕ ಪ್ರಯತ್ನ ಮಾಡಿಯೂ ಇನ್ನೊಂದು ಪ್ರಯತ್ನ ಮಾಡಲು ನಿರಾಶನಾಗಿದ್ದರಿಂದ ಸೋಲುಂಟಾಯಿತು. ಬಡ ಶಿಲ್ಪಿಯು ಸುಂದರವಾದ ಮೂರ್ತಿಯನ್ನು ತಯಾರು ಮಾಡಿ ರಾಜನಿಗೆ ಅರ್ಪಿಗೆ ಸನ್ಮಾನವನ್ನು ಸ್ವೀಕರಿಸುತ್ತಾನೆ.

ಕಥೆಯ ಸಾರಾಂಶವಷ್ಟೇ ನಿರಂತರ ಪ್ರಯತ್ನದಲ್ಲಿ ಯಶಸ್ಸು ಸಿಗುತ್ತದೆ. ಸತತ ಸೋಲುಗಳೇ ಗೆಲುವಿನ ಮಾರ್ಗವನ್ನು ಪ್ರಶಸ್ತಗೊಳಿಸುತ್ತವೆ. ಸೋಲುಗಳು ಮನಸ್ಸಿನ ಮೇಲೆ ಘಾಸಿ ಮಾಡದಂತೆ ನೋಡುತ್ತಾ ಸಾಗಬೇಕು.

ದೀಪಾವಳಿ ಹಬ್ಬವು ಮನುಷ್ಯನಲ್ಲಿರುವ ಅಂಧಕಾರವನ್ನು ದೂರ ಮಾಡಿ ಆತ್ಮ ಜ್ಯೋತಿಯನ್ನು ಬೆಳಗಿಸುವ ಸೂಚಕವಾಗಿದೆ.

**ಭಗವಾನ ಮಹಾವೀರ ತೀರ್ಥಂಕರರ 2550ನೇ ನಿರ್ವಾಣ ಮಹೋತ್ಸವದ ಹಾಗೂ ದೀಪಾವಳಿ ಹಬ್ಬದ ಶುಭಾಶಯಗಳು**

**ಹೊಂಬುಜ ಅತಿಶಯ ಶ್ರೀಕ್ಷೇತ್ರ - ಶ್ರೀ ಶರನ್ನವರಾತ್ರಿ ಪೂಜಾ ಘಟಸ್ಥಾಪನೆ**

## "ಶ್ರದ್ಧಾಭಕ್ತಿಯ ಆರಾಧನೆ ನೈಜ ಆಧ್ಯಾತ್ಮಿಕ ಉಪಾಸನೆ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ:** ಶ್ರದ್ಧಾ ಭಕ್ತಿಯಿಂದ ದೇವರ-ದೇವತಾ ಪೂಜಾ ವಿಧಿ-ವಿಧಾನಗಳಲ್ಲಿ **ಪಾಲ್ಗೊಳ್ಳುವುದು ನೈಜ ಆಧ್ಯಾತ್ಮಕ ಉಪಾಸನೆ** ಎಂದು ಹೊಂಬುಜ ಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರು ಪೂರ್ವ ಜಿನಾಗಮ ಪರಂಪರಾನುಗತ ಶ್ರೀ ಶರನ್ನವರಾತ್ರಿ ಪೂಜಾ ವಿಧಿಯಂತೆ ಜಗನ್ಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಘಟಸ್ಥಾಪನೆಯ ಬಳಿಕ ಪ್ರವಚನದಲ್ಲಿ ತಿಳಿಸಿದರು. ಭಕ್ತವೃಂದದವರ ಪ್ರಾರ್ಥನೆಯ ಫಲಾಪೇಕ್ಷೆಯನ್ನು ದೇವರು ಕರುಣಿಸಲಿ ಎಂದು ಶುಭಾಶೀರ್ವಾದ ನೀಡಿದರು.

2ನೇ ಪುಟಕ್ಕೆ


WWW.HOMBUJAPADMAVATI.ORG

**ವಿಜಯದಶಮಿಯಂದು ಸ್ವಸ್ತಿಶ್ರೀಗಳವರ ಸಿಂಹಾಸನಾರೋಹಣ**

## "ಜೈನ ಸಿದ್ಧಾಂತಗಳ ಅನುಕರಣೆಯಿಂದ ಸಾಮರಸ್ಯ ಜೀವನ ನಿರ್ವಹಣೆಗೆ ಆದ್ಯತೆ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ





ಹೊಂಬುಜ : ಶ್ರೀಮಠದ ಪೀಠಾಧೀಶರ ಶ್ರೀ ಸಿಂಹಾಸನಕ್ಕೆ ಸಾಂಪ್ರದಾಯಿಕ ಪೂಜೆ ನೆರವೇರಿಸಿ, ಪೀಠಾಧೀಶರಾದ ಶ್ರೀಗಳವರು ಸಿಂಹಾಸನಾರೂಢರಾದ ಬಳಿಕ **"ವಿಶ್ವದಲ್ಲಿ ಶಾಂತಿ-ಸಮಾನತೆ-ಸೌಹಾರ್ದತೆ ಕಾಪಾಡಬೇಕು. ಜೈನಾಚಾರ್ಯರು ಅನೇಕಾಂತವಾದ, ಸ್ಯಾದ್ವಾದ ಪ್ರಮೇಯಗಳನ್ನು ಲೌಕಿಕ ಜೀವನದಲ್ಲಿ ಅಳವಡಿಸಿಕೊಂಡಾಗ ಸ್ಥಳೀಯ, ರಾಷ್ಟ್ರೀಯ, ಅಂತರಾಷ್ಟ್ರೀಯ ಸಮಸ್ಯೆಗಳು ಪರಿಹರಿಸಲ್ಪಡುತ್ತದೆ. ಗೃಹಸ್ಥರು ಸಾಮರಸ್ಯದ ವಾತ್ಸಲ್ಯಮಯಿ ಜೀವನ ನಿರ್ವಹಣೆಗೆ ಜೈನಾಗಮ ಗ್ರಂಥಗಳು, ಮುನಿಶ್ರೀಗಳ ಆರ್ಯಿಕೆಯರ ಉಪದೇಶಗಳನ್ನು ಪುನರಾವಲೋಕನ ಮಾಡಬೇಕು"** ಎಂಬ ಧರ್ಮ ಸಂದೇಶವನ್ನು ಅ.12ರ ಶನಿವಾರ ವಿಜಯದಶಮಿಯ ಸುದಿನದಂದು ಪ್ರಕಟಿಸಿದರು. ನಂತರ ಭಕ್ತರಿಗೆ ಶ್ರೀಫಲ ಮಂತ್ರಾಕ್ಷತೆ ನೀಡಿದರು.

ಭಕ್ತರು ಶ್ರೀಗಳವರಿಗೆ ಪಾದಕಾಣಿಕೆಗಳನ್ನು ಅರ್ಪಿಸಿದರು. ಶ್ರೀಕ್ಷೇತ್ರದ ಸೇವಾಕರ್ತ ಭಕ್ತರು, ಕಾರ್ಯನಿರ್ವಹಣಾಧಿಕಾರಿ, ಆಡಳಿತಾಧಿಕಾರಿಗಳು, ಊರ ಪರವೂರ ಭಕ್ತರು ಪೂಜೆ-ಉತ್ಸವಗಳಲ್ಲಿ ಪಾಲ್ಗೊಂಡಿದ್ದರು. ಪುರೋಹಿತರಾದ ಪದ್ಮರಾಜ ಇಂದ್ರ, ಸಹ ಪುರೋಹಿತರು ಪೂಜಾ ವಿಧಿಗಳನ್ನು ನೆರವೇರಿಸಿದರು. ಹತ್ತು ದಿನಗಳ ಪರ್ಯಂತ ಶರನ್ನವರಾತ್ರಿ, ವಿಜಯದಶಮಿ ಉತ್ಸವವು ಸಂಪನ್ನಗೊಂಡಂತಾಯಿತು.

2ನೇ ಪುಟಕ್ಕೆ

## ಹೊಂಬುಜ ಅತಿಶಯ ಶ್ರೀಕ್ಷೇತ್ರ - ಶ್ರೀ ಶರನ್ನವರಾತ್ರಿ ಪೂಜಾ ಘಟಸ್ಥಾಪನೆ

1ನೇ ಪುಟದಿಂದ

ಅಭೀಷ್ಟವರಪ್ರದಾಯಿನಿ ಯಕ್ಷಿ ಶ್ರೀ ಪದ್ಮಾವತಿ ದೇವಿ ಶೋಭಿತಳಾಗಿ, ಸ್ವರ್ಣರಜತ ಆಭರಣಗಳಿಂದ ಭಕ್ತರ ಕಣ್ಮನ ಸೆಳೆಯುವಂತೆ ಪುಷ್ಪ-ಫಲಗಳಿಂದ ಅಲಂಕಾರ ಮಾಡಲಾಗಿತ್ತು. ಅಷ್ಟವಿಧಾರ್ಚನೆಯನ್ನು ಭಕ್ತರ ಜಿನಭಜನೆ ವಾದ್ಯಗೋಷ್ಠಿಯೊಂದಿಗೆ ನೆರವೇರಿಸಲಾಯಿತು. ರಾತ್ರಿ ಅಷ್ಟವಧಾನದ ಮೂಲಕ ಜಿನಾಲಯದ ಪ್ರದಕ್ಷಿಣಾ ಪಥದಲ್ಲಿ ಉತ್ಸವಗಳಲ್ಲಿ ಭಕ್ತರು ಭಾಗಿಯಾದರು. ಊರ ಪರವೂರ ಭಕ್ತರು, ಶ್ರೀ ಪದ್ಮಾವತಿ ಮಹಿಳಾ ಮಂಡಲದವರು ಇದ್ದರು. ಆಕರ್ಷಕ ದೀಪಾಲಂಕಾರ ಗಮನ ಸೆಳೆಯುವಂತಿತ್ತು. ಸ್ವಾಮೀಜಿಯವರು ಶ್ರೀ ಮಂತ್ರಾಕ್ಷತೆ ನೀಡಿ ಹರಸಿದರು.

## ವಿಜಯದಶಮಿಯಂದು ಸ್ವಸ್ತಿಶ್ರೀಗಳವರ ಸಿಂಹಾಸನಾರೋಹಣ

1ನೇ ಪುಟದಿಂದ

### ಉತ್ಸವಮೂರ್ತಿ ಶೋಭಾಯಾತ್ರೆ:

ಶ್ರೀ ಕ್ಷೇತ್ರದಿಂದ ಸುಮುಹೂರ್ತದಲ್ಲಿ ಉತ್ಸವ ಮೂರ್ತಿಯನ್ನು ಪುಷ್ಪಾಲಂಕೃತ ಪಲ್ಲಕ್ಕಿಯಲ್ಲಿ ಹೊತ್ತುಕೊಂಡು ಬನ್ನಿಮಂಟಪಕ್ಕೆ ನೃತ್ಯ, ವಾದ್ಯ, ಜಿನಭಜನೆ, ಜಯಘೋಷ, ಸಾಲಂಕೃತ ಧ್ವಜಗಳ ಸಹಿತ ಶೋಭಾಯಾತ್ರೆಯು ಗಜರಾಣಿ ಐಶ್ವರ್ಯ, ಅಶ್ವ ಮಾನವಿ, ಚೇತಕ್, ಪವನ್‌ಯೊಂದಿಗೆ ಆಕರ್ಷಕವಾಗಿ ಸಾಗಿತ್ತು. ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರು ಪೂಜೆ, ಪ್ರಾರ್ಥನೆ ಸಮರ್ಪಿಸಿದರು. **"ಸರ್ವರಿಗೂ ಕ್ಷೇಮವನ್ನುಂಟು ಮಾಡುವ ಅಭೀಷ್ಟವರಪ್ರದಾಯಿನಿ ಮಹಾಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿಯ ಕೃಪೆಯಿರಲಿ"** ಎಂದು ಹರಸಿ ಬನ್ನಿ ವಿತರಿಸಿದರು.

## ಬೆಳ್ತಂಗಡಿ ಬಸದಿಯಲ್ಲಿ ವಿಶೇಷ ಆರಾಧನೆ, ವಿದ್ಯಾರ್ಥಿ ಪ್ರೋತ್ಸಾಹಧನ ವಿತರಣೆ

## "ವಿದ್ಯೆಯ ಜೊತೆ ಉತ್ತಮ ಸಂಸ್ಕಾರ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಿ"



**ಉಜಿರೆ:** ವಿದ್ಯಾರ್ಥಿಗಳು ವಿದ್ಯೆಯ ಜೊತೆ ಉತ್ತಮ ಸಂಸ್ಕಾರ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಹೊಂಬುಜ ಜೈನಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮೀಜಿ ಬೆಳ್ತಂಗಡಿ ಜೈನಪೇಟೆಯಲ್ಲಿರುವ ರತ್ನತ್ರಯ ತೀರ್ಥಕ್ಷೇತ್ರದಲ್ಲಿ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ 733 ವಿದ್ಯಾರ್ಥಿಗಳಿಗೆ ರೂ. 20,29,000/- ವಿದ್ಯಾರ್ಥಿ ಪ್ರೋತ್ಸಾಹಧನವನ್ನು ಕಿನ್ಯಮ್ಮ ಯಾನೆ ಗುಣಾವತಿ ಅಮ್ಮ ಸ್ಮಾರಕ ಟ್ರಸ್ಟ್ ವತಿಯಿಂದ ವಿತರಿಸಿ ಆಶೀರ್ವಚನ ನೀಡಿದರು.

ಇಂದಿನ ಅತ್ಯಂತ ವೇಗ ಮತ್ತು ಸ್ಪರ್ಧಾತ್ಮಕ ಜಗತ್ತಿನಲ್ಲಿ ಪೋಷಕರು ಮತ್ತು ವಿದ್ಯಾರ್ಥಿಗಳು ಒತ್ತಡದಲ್ಲೇ ಬದುಕುತ್ತಿದ್ದಾರೆ. ಗುರುಹಿರಿಯರಿಂದಲೂ ಮಕ್ಕಳಿಗೆ ಸಕಾಲಿಕ ಮಾರ್ಗದರ್ಶನ ಸಿಗುತ್ತಿಲ್ಲ. ಹಣ, ಉದ್ಯೋಗ, ಆಸ್ತಿ, ಕೀರ್ತಿ ಯಾವುದೂ ಶಾಶ್ವತವಲ್ಲ. ವಿದ್ಯಾರ್ಥಿಗಳು ವಿದ್ಯೆಯೊಂದಿಗೆ ವಿನಯ, ಪರೋಪಕಾರ, ಕರುಣೆ, ಅನುಕಂಪ ಮೊದಲಾದ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಸ್ವಾಮೀಜಿ ಸಲಹೆ ನೀಡಿದರು.

ಬಸದಿಯ ಅನುವಂಶಿಕ ಆಡಳಿತ ಮೊಕ್ತೇಸರ ಕೆ. ಜಯವರ್ಮರಾಜ ಬಳ್ಳಾಲ್ ಸ್ವಾಗತಿಸಿದರು. ಕೆ. ರಾಜವರ್ಮ ಬಳ್ಳಾಲ್, ಡಾ. ಜೀವಂಧರ ಬಳ್ಳಾಲ್, ಕೆ. ಪ್ರಸನ್ನ ಕುಮಾರ್, ಪ್ರೇಮ್ ಕುಮಾರ್ ಹೊಸ್ಮಾರು, ವಿಜಯಾ ಬ್ಯಾಂಕ್ ನಿವೃತ್ತ ಮ್ಯಾನೇಜರ್ ಎಂ. ಜಿನರಾಜ ಶೆಟ್ಟಿ ಇನ್ನಿತರರು ಉಪಸ್ಥಿತರಿದ್ದರು.

ಬಸದಿಯಲ್ಲಿ 24 ತೀರ್ಥಂಕರರ ಆರಾಧನೆ ಮತ್ತು ವಿಶೇಷ ಪೂಜೆ ನಡೆಯಿತು. ಶಿಕ್ಷಕ ಧರಣೇಂದ್ರ ಕುಮಾರ್ ಕಾರ್ಯಕ್ರಮವನ್ನು ನಿರ್ವಹಿಸಿದರು.

## ಡಾ. ಪದ್ಮರಾಜ ದಂಡಾವತಿಯವರಿಗೆ ಟಿ.ಎಸ್.ಆರ್. ಪ್ರಶಸ್ತಿ



**ಬೆಂಗಳೂರು:** ಪ್ರಜಾವಾಣಿ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾಗಿ ನಿವೃತ್ತರಾದ ಕನ್ನಡದ ಹಿರಿಯ ಪತ್ರಕರ್ತ ಮತ್ತು ಲೇಖಕ ಡಾ. ಪದ್ಮರಾಜ ದಂಡಾವತಿ ಅವರಿಗೆ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಟಿ.ಎಸ್.ಆರ್ ಪತ್ರಿಕೋದ್ಯಮ ಪ್ರಶಸ್ತಿ (2022) ಪ್ರಕಟವಾಗಿದೆ.

ನಿವೃತ್ತ ನ್ಯಾಯಮೂರ್ತಿ ಶ್ರೀ ಪಿ.ಎನ್.ದೇಸಾಯಿ ಅವರ ನೇತೃತ್ವದ ಆಯ್ಕೆ ಸಮಿತಿಯ ಸದಸ್ಯರ ಆಯ್ಕೆಗಳನ್ನು ಆಧರಿಸಿ ಸರ್ಕಾರ ಈ ಆದೇಶ ಹೊರಡಿಸಿದೆ. ಪ್ರಶಸ್ತಿಯು 2 ಲಕ್ಷ ರೂಪಾಯಿ ನಗದು, ಪ್ರಶಸ್ತಿ ಫಲಕ, ಶಾಲು, ಫಲ ಒಳಗೊಂಡಿದೆ ಎಂದು ವಾರ್ತಾ ಇಲಾಖೆಯ ಪ್ರಕಟಣೆ ತಿಳಿಸಿದೆ. ಶೀಘ್ರದಲ್ಲಿಯೇ ನಡೆಯಲಿರುವ ಸಮಾರಂಭದಲ್ಲಿ ಮುಖ್ಯಮಂತ್ರಿಗಳು ಈ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಪತ್ರಕರ್ತರಿಗೆ ಅವರ ಜೀವಮಾನ ಸಾಧನೆ ಪರಿಗಣಿಸಿ ಕೊಡುವ ಅತ್ಯುನ್ನತ ಪ್ರಶಸ್ತಿ ಎಂದು ಟಿ.ಎಸ್.ಆರ್ ಪ್ರಶಸ್ತಿ ಪರಿಗಣಿತವಾಗಿದೆ. ಡಾ.ಪದ್ಮರಾಜ ದಂಡಾವತಿ ಯವರು ಪ್ರಜಾವಾಣಿ ಪತ್ರಿಕೆಯಲ್ಲಿ 36 ವರ್ಷಗಳ ಕಾಲ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿ ಕಾರ್ಯನಿರ್ವಾಹಕ ಸಂಪಾದಕರಾಗಿ ಹತ್ತು ವರ್ಷ ದುಡಿದಿದ್ದಾರೆ. ಅವರು 20 ಕ್ಕೂ ಹೆಚ್ಚು ಸ್ವತಂತ್ರ ಕೃತಿಗಳನ್ನು ರಚಿಸಿದ್ದಾರೆ. ಅವರ 'ಸೀತಾ ರಾಮಾಯಣ' ಕೃತಿಯ ಅನುವಾದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರತಿಷ್ಠಿತ ಪ್ರಶಸ್ತಿಯೂ ಸಂದಿದೆ.

**ಜಿನ-ದನಿ**

ಸದ್ದಹೀಣೊ ಣ ಗಂಧವ್ವೋ, ದವ್ವಹೀಣಾ ಣ ಭಾವಣಾ।
ಭಾವಹೀಣೊ ಣ ಧಮ್ಮತ್ಥಿ, ಧಮ್ಮಹೀಣೊ ಹು ಣೊ ಸುಹೀ ॥5॥

ಅರ್ಥ: (ಸುರ,ರಾಗ) ಶಬ್ದದಿಂದ ರಹಿತ ಗಂಧರ್ವ(ಸಂಗೀತ) ಇರುವುದಿಲ್ಲ, ದ್ರವ್ಯದಿಂದ ರಹಿತ ಯಾವುದೇ ಭಾವವಿರುವುದಿಲ್ಲ, ಭಾವದಿಂದ ರಹಿತ ಧರ್ಮಾರ್ಥಿ ಇರುವುದಿಲ್ಲ, ಧರ್ಮದಿಂದ ರಹಿತ ಸುಖಿ ಇರುವುದಿಲ್ಲ.

## ಬರಲಿರುವ ಪರ್ವದಿನಗಳು

ಕ್ರೋಧಿನಾಮ ಸಂವತ್ಸರದ

ಆಶ್ವೀಜಮಾಸ ಶುಕ್ಲಪಕ್ಷ ಹುಣ್ಣಿಮೆಯಿಂದ ಕಾರ್ತೀಕಮಾಸ ಶುಕ್ಲಪಕ್ಷ ಬಿದಿಗೆಯವರೆಗೆ

| ಆಶ್ವೀಜ ಮಾಸ | | ಕಾರ್ತಿಕ ಮಾಸ | |
|---|---|---|---|
| ಅ. | 17 ಗುರು-ಹುಣ್ಣಿಮೆ-ರೇವತಿ | ನ. | 02 ಶನಿ-ಪ್ರತಿಪದ-ವಿಶಾಖ, ದೀಪಾವಳಿ |
| ಅ. | 18 ಶುಕ್ರ-ಪ್ರತಿಪದ-ಅಶ್ವೀನಿ | ನ. | 03 ಭಾನು-ಬಿದಿಗೆ-ವಿಶಾಖ |
| ಅ. | 19 ಶನಿ-ಬಿದಿಗೆ-ಭರಣಿ | ನ. | 04 ಸೋಮ-ತದಿಗೆ-ಅನುರಾಧ |
| ಅ. | 20 ಭಾನು-ತದಿಗೆ-ಚತುರ್ಥಿ-ಕೃತಿಕಾ | ನ. | 05 ಮಂಗಳ-ಚತುರ್ಥಿ-ಜ್ಯೇಷ್ಠ |
| ಅ. | 21 ಸೋಮ-ಪಂಚಮಿ-ರೋಹಿಣಿ | ನ. | 06 ಬುಧ-ಪಂಚಮಿ-ಮೂಲ |
| ಅ. | 22 ಮಂಗಳ-ಷಷ್ಠಿ-ಮೃಗಶಿರಾ | ನ. | 07 ಗುರು-ಷಷ್ಠಿ-ಪೂ.ಷಾ. |
| ಅ. | 23 ಬುಧ-ಸಪ್ತಮಿ-ಆರಿದ್ರಾ | ನ. | 08 ಶುಕ್ರ-ಸಪ್ತಮಿ-ಉ.ಷಾ. |
| ಅ. | 24 ಗುರು-ಅಷ್ಟಮಿ-ಪುನರ್ವಸು | ನ. | 09 ಶನಿ-ಅಷ್ಟಮಿ-ಶ್ರವಣ |
| ಅ. | 25 ಶುಕ್ರ-ನವಮಿ-ಪುಷ್ಯ | ನ. | 10 ಭಾನು-ನವಮಿ-ಧನಿಷ್ಠ |
| ಅ. | 26 ಶನಿ-ದಶಮಿ-ಆಶ್ಲೇಷ | ನ. | 11 ಸೋಮ-ದಶಮಿ-ಶತಭಿಷ |
| ಅ. | 27 ಭಾನು-ಏಕಾದಶಿ-ಮಘಾ | ನ. | 12 ಮಂಗಳ-ಏಕಾದಶಿ-ಪೂ.ಭಾ. |
| ಅ. | 28 ಸೋಮ-ಏಕಾದಶಿ-ಪೂರ್ವಾ | ನ. | 13 ಬುಧ-ದ್ವಾದಶಿ-ಉ.ಭಾ. ರೇವತಿ |
| ಅ. | 29 ಮಂಗಳ-ದ್ವಾದಶಿ-ಉತ್ತರ | ನ. | 14 ಗುರು-ತ್ರಯೋದಶಿ-ಅಶ್ವಿನಿ |
| ಅ. | 30 ಬುಧ-ತ್ರಯೋದಶಿ-ಹಸ್ತ | ನ. | 15 ಶುಕ್ರ-ಚತುರ್ದಶಿ-ಹುಣ್ಣಿಮೆ-ಭರಣಿ |
| **ಅ.** | **31 ಗುರು-ಚತುರ್ದಶಿ-ಚಿತ್ತಾ, ನರಕ ಚತುರ್ದಶಿ** | ನ. | 16 ಶನಿ-ಪ್ರತಿಪದ-ಕೃತಿಕಾ |
| ನ. | **01 ಶುಕ್ರ-ಅಮವಾಸ್ಯೆ-ರೇವತಿ, ದೀಪಾವಳಿ ಅಮವಾಸ್ಯೆ,** | ನ. | 17 ಭಾನು-ಬಿದಿಗೆ-ರೋಹಿಣಿ. |

## ಕ್ಷಮಾವಳಿ ಶೋಭಾಯಾತ್ರೆ

## "ಕ್ಷಮಾ ಮನೋಧರ್ಮದಿಂದ ಮೈತ್ರಿಭಾವ ವೃದ್ಧಿ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಸೆ.18): "ಉತ್ತಮ ದಶಧರ್ಮ ಲಕ್ಷಣಗಳ ಕುರಿತು ಮನನ ಮಾಡಿ, ಜೀವನದಲ್ಲಿ ರೂಢಿಸಿಕೊಳ್ಳುವ ಮೂಲಕ ದೈನಂದಿನ ಆಗುಹೋಗುಗಳ ವಿದ್ಯಾಮಾನಗಳಿಂದ ವಿಚಲಿತರಾಗಬೇಕಿಲ್ಲ. ದೃಢ ಸಂಕಲ್ಪದ ಧರ್ಮ ಮಾರ್ಗದಲ್ಲಿ ಸಾಧನೆಯ ಗುರಿ ತಲುಪಲು ಸಾಧ್ಯವಾಗಿದೆ"** ಎಂದು ಹೊಂಬುಜ ಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು ಪರ್ಯೂಷಣಾ ಪರ್ವದ ಬಳಿಕ ಧರ್ಮ ಪ್ರವಚನದಲ್ಲಿ ಜೈನ ಸಿದ್ಧಾಂತ, ತೀರ್ಥಂಕರರ ವೃತ್ತಾಂತ, ಆಗಮೋಕ್ತ ಪದ್ಧತಿ, ಪೂಜೆಯ ಫಲಾಫಲ, ಧರ್ಮನಿಷ್ಠೆಯ ಮಹತ್ವ ಮತ್ತು ಕಾಯಾ, ವಾಚಾ, ಮನಸಾ ವಾತ್ಸಲ್ಯದಿಂದ ಬಾಂಧವ್ಯವಿಟ್ಟುಕೊಂಡು, ಕಾಲಕಾಲಕ್ಕೆ ಧಾರ್ಮಿಕ ವಿಧಿಗಳನ್ನು ನೆರವೇರಿಸುತ್ತಾ ಸಮಾಜದ ಅಭ್ಯುದಯಕ್ಕೆ ಪೂರಕ ದಾನಾದಿ ವಿನಿಯೋಗ ಮಾಡುವುದು ಶಾಶ್ವತ ಶಾಂತಿ ನೀಡಬಲ್ಲದು ಎಂದು ಸಾಮೂಹಿಕ ಕ್ಷಮಾವಾಣಿಯಂದು ಮಂತ್ರೋಚ್ಚಾರಣೆ ಮಾಡಿದರು.

ಆರ್ಯಿಕಾರತ್ನ ಶ್ರೀ 105 ಶಿವಮತಿ ಮಾತಾಜಿಯವರು ಧಾರ್ಮಿಕ ವಿಧಾನಗಳಲ್ಲಿ ದಿವ್ಯ ಉಪಸ್ಥಿತಿ ನೀಡಿದರು. ಕ್ಷೇತ್ರದ ಶ್ರೀ 1008 ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿ, ಶ್ರೀ ಆದಿನಾಥ ಸ್ವಾಮಿ, ಶ್ರೀ ನೇಮಿನಾಥ ಸ್ವಾಮಿ, ಶ್ರೀ ಮಹಾವೀರ ಸ್ವಾಮಿ, ಶ್ರೀ ಕೂಷ್ಮಾಂಡಿನಿ ದೇವಿ, ಶ್ರೀ ಸರಸ್ವತಿ ದೇವಿ ಸನ್ನಿಧಿಯಲ್ಲಿ ಪೂರ್ವ ಪರಂಪರೆಯಂತೆ ಪೂಜಾ ವಿಧಿ-ವಿಧಾನಗಳು ನೆರವೇರಿದವು. ಪುರೋಹಿತ ಶ್ರೀ ಪದ್ಮರಾಜ ಇಂದ್ರ ಸಹ ಪುರೋಹಿತರು ಪೂಜಾ ವಿಧಾನಗಳ ಪ್ರಕ್ರಿಯೆಯನ್ನು ಜರುಗಿಸಿದರು. ಹುಂಚ ಜೈನ ಸಮಾಜ, ಶ್ರೀ ಪದ್ಮಾವತಿ ಮಹಿಳಾ ಮಂಡಲ, ಶ್ರೀ ಕುಂದ ಕುಂದ ವಿದ್ಯಾಪೀಠದ ವಿದ್ಯಾರ್ಥಿಗಳು, ಪರವೂರ ಭಕ್ತಾದಿಗಳು ಕ್ಷಮಾವಳಿ ಶೋಭಾಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಅಹಿಂಸಾ ಪರಮೋ ಧರ್ಮ ಕೀ ಜೈ, ಪರ್ಯೂಷಣ ಪರ್ವ ಕಿ ಜೈ ಎಂಬ ಜಯಘೋಷ, ಐಶ್ವರ್ಯ ಗಜರಾಣಿ ಜೈನ ಧ್ವಜದೊಂದಿಗೆ ಶೋಭಾಯಾತ್ರೆಗೆ ಮೆರಗು ನೀಡಿತು.

## ಶರನ್ನವರಾತ್ರಿಯಂದು ಕುಂಕುಮಾರ್ಚನೆ

### "ಸಹಸ್ರನಾಮ ಕುಂಕುಮಾರ್ಚನೆಯಿಂದ ಸಾಮರಸ್ಯ ಜೀವನ ನಿರ್ವಹಣೆ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ:** ಶರನ್ನವರಾತ್ರಿಯ ದ್ವಿತೀಯ ದಿನದ ಧಾರ್ಮಿಕ ವಿಧಿಗಳು ಆಗಮೋಕ್ತ ಶಾಸ್ತ್ರದನ್ವಯ ಹೊಂಬುಜ ಶ್ರೀಮಠದ ಪೀಠಾಧೀಶರಾದ ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರ ದಿವ್ಯ ಸಾನಿಧ್ಯ, ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಲೋಕವಂದ್ಯ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ನೆರವೇರಿಸಲಾಯಿತು. ಊರ ಪರವೂರ ಶ್ರಾವಕ-ಶ್ರಾವಕಿಯರು ಸಹಸ್ರನಾಮ ಕುಂಕುಮಾರ್ಚನೆಯಲ್ಲಿ ತನ್ಮಯತೆಯಿಂದ ಪಾಲ್ಗೊಂಡರು.

ಭಕ್ತರ ಅಚಲ ಭಕ್ತಿಯಿಂದ ಸಹಸ್ರನಾಮ ಕುಂಕುಮಾರ್ಚನೆ ಮಾಡಿರುವುದರಿಂದ ಸಾಮರಸ್ಯದ ಜೀವನ ನಿರ್ವಹಣೆಗೆ ಪೂರಕವಾಗಿರುತ್ತದೆ ಎಂದು ಸ್ವಸ್ತಿಶ್ರೀಗಳವರು ಆಶೀರ್ವಚನ ನೀಡಿ, ಭಕ್ತರನ್ನು ಶ್ರೀ ಮಂತ್ರಾಕ್ಷತೆಯಿಂದ ಹರಸಿದರು. ಪುಷ್ಪ-ಫಲಗಳಿಂದ ಶ್ರೀ ಪದ್ಮಾವತಿ ದೇವಿ, ಸುವರ್ಣ-ರಜತ ಆಭರಣಗಳಿಂದ ಶೋಭಾಯಮಾನವಾಗಿ ಅಲಂಕರಿಸಿರುವುದು ವಿಶೇಷವಾಗಿತ್ತು.

## ಶರನ್ನವರಾತ್ರಿ ಉತ್ಸವದ ಷಷ್ಠಿಯಂದು ಬಳೆಗಳ ಅಲಂಕಾರ

### ಧಾರ್ಮಿಕ ಕಂಕಣಬದ್ಧತೆಯ ಪ್ರತೀಕ ಬಳೆಗಳು "ಸಮೃದ್ಧ ಸಂಸಾರಕ್ಕೆ ಸೋಪಾನವಾಗಲಿ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



WWW.HOMBUJAPADMAVATI.ORG

**ಹೊಂಬುಜ (ಅ. 08) :** ಜೀವನದಲ್ಲಿ ಧಾರ್ಮಿಕ ಪ್ರಜ್ಞೆಯಿಂದ ಕಂಕಣ ಬದ್ಧರಾಗಿ ನಿರ್ದಿಷ್ಟ ಕಾರ್ಯದಲ್ಲಿ ತಲ್ಲೀನರಾಗುವುದರಿಂದ ಯಶಸ್ಸು ನಿಶ್ಚಿತ. ಬಳೆಗಳನ್ನು ಅಭೀಷ್ಟವರಪ್ರದಾಯಿನಿ ಜಗದಾಂಬೆ ಯಕ್ಷಿ ಶ್ರೀ ಪದ್ಮಾವತಿ ದೇವಿಯ ಸನ್ನಿಧಿಯಲ್ಲಿ ಭಕ್ತಿಪೂರ್ವಕ ಸಮರ್ಪಿಸುವುದರಿಂದ ಭಕ್ತರಿಗೆ ಸಮೃದ್ಧ ಸಂಸಾರ ಸುಖ-ಶಾಂತಿ-ಆರೋಗ್ಯ ಲಭಿಸುವಂತಾಗುತ್ತದೆ ಎಂದು ಸ್ವಸ್ತಿಶ್ರೀಗಳವರು ನವರಾತ್ರಿಯ 6ನೇ ದಿನದಂದು ಪ್ರವಚನದಲ್ಲಿ ತಿಳಿಸಿ, ಜೀವನ ಸೋಪಾನವಾಗಲೆಂದು ಹರಸಿದರು. ಮಹಾಮಾತೆ ಶ್ರೀ ಪದ್ಮಾವತಿ ಅಮ್ಮನವರಿಗೆ ಬಳೆಗಳ ಅಲಂಕಾರ ಮಾಡಲಾಗಿತ್ತು. ಊರ-ಪರವೂರ ಭಕ್ತರು ಪಾಲ್ಗೊಂಡು ಧನ್ಯರಾದರು. ಯಥೋಚಿತ ಅನ್ನಪ್ರಸಾದ ಸ್ವೀಕರಿಸಿದ ಭಕ್ತರು ಶ್ರೀ ಕ್ಷೇತ್ರದ ಜಿನಾಲಯಗಳ ದರ್ಶನ ಪಡೆದರು. ವಾದ್ಯಗೋಷ್ಠಿ, ಜಿನಭಜನೆ ಶ್ರೀಕ್ಷೇತ್ರದಲ್ಲಿ ಧರ್ಮಜಾಗೃತಿ ಪಸರಿಸಿತು.

## ಶರನ್ನವರಾತ್ರಿ 'ಮಹಾನವಮಿ' ಉತ್ಸವ

### "ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಸದಾಕಾಲ ಸರ್ವರಿಗೂ ಕ್ಷೇಮವನ್ನುಂಟು ಮಾಡಲಿ"



## ಶರನ್ನವರಾತ್ರಿ ಸಪ್ತಮಿ ಸುದಿನದಂದು ಸರಸ್ವತಿ ದೇವಿಯ ಪೂಜೆ

### "ವಿದ್ಯಾ ಶ್ರೀ ಸರಸ್ವತಿ ದೇವಿ ಸ್ತೋತ್ರ ಸ್ತುತಿ
### ಶ್ರೀ ಸರಸ್ವತಿ ದೇವಿಯ ನಿತ್ಯ ಆರಾಧನೆಯಿಂದ ಧೀ, ಧೃತಿ, ಶ್ರುತ ಜ್ಞಾನ ಪ್ರಾಪ್ತಿ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ:** ಆಶ್ವಯುಜ ಶುಕ್ಲ ಸಪ್ತಮಿಯಂದು ಸರಸ್ವತಿ ಪೂಜೆ ನೆರವೇರಿತು. ವಿದ್ಯಾಶ್ರೀ ಸರಸ್ವತಿ ದೇವಿ ಸ್ತೋತ್ರ ಸ್ತುತಿಸಲಾಯಿತು. ಭಕ್ತ ಸಮುದಾಯದವರು ಶ್ರೀಫಲ-ಪುಷ್ಪ-ಫಲಗಳನ್ನರ್ಪಿಸಿದರು.

ಪ್ರತಿಯೋರ್ವರೂ ಶೈಕ್ಷಣಿಕವಾಗಿ ಪ್ರಗತಿ ಹೊಂದಿದಾಗ ಜೀವನದ ಸಂಕಷ್ಟಗಳು ಎದುರಾಗುವುದಿಲ್ಲ. ಭಕ್ತಿ, ಶ್ರದ್ಧೆಯಿಂದ ಶ್ರೀ ಸರಸ್ವತಿ ಮಾತೆಯ ನಾಮಸ್ಮರಣೆ ಮಾಡುವುದರಿಂದ ಸುಲಲಿತವಾಗಿ ಜ್ಞಾನ ಪ್ರಾಪ್ತಿಯಾಗುತ್ತದೆ ಎಂದು ಶ್ರೀಗಳವರು ಪ್ರವಚನದಲ್ಲಿ ವಿಸ್ತಾರವಾಗಿ ತಿಳಿಸುತ್ತಾ ಜ್ಞಾನ ಸುಜ್ಞಾನವಂತರಾಗಿ ಧೀರರಾಗಿ, ಧೃತಿಗೆಡದೇ, ಸಂಸ್ಕಾರಯುತ ಜೀವನದಲ್ಲಿ ಯಶಸ್ಸು ಲಭಿಸುವುದೆಂದು ಶ್ರೀಗಳವರು ದರ್ಶನಾರ್ಥಿ ಭಕ್ತರಿಗೆ ಶ್ರೀ ಮಂತ್ರಾಕ್ಷತೆ ನೀಡಿ, ಆಶೀರ್ವದಿಸಿದರು.

## ಶರನ್ನವರಾತ್ರಿ ಅಷ್ಟಮ ಸುದಿನ ಜೀವದಯಾಷ್ಟಮಿ

### "ಧಾನ್ಯಾದಿ ದ್ರವ್ಯ ಸಮರ್ಪಣೆ ಜೀವದಯ ಕಾರುಣ್ಯ ಭಾವವು ಜೀವ ವೈವಿಧ್ಯತೆಯ ಸಂರಕ್ಷಣೆಗೆ ಪೂರಕ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಅ. 10) :** ಆಶ್ವಯುಜ ಶುಕ್ಲ ಅಷ್ಟಮಿಯ ನವರಾತ್ರಿ ಸುದಿನದಲ್ಲಿ ಅತಿಶಯ ಶ್ರೀಕ್ಷೇತ್ರ ಹೊಂಬುಜ ಶ್ರೀ 1008 ಪಾರ್ಶ್ವನಾಥ ಸ್ವಾಮಿ ವಿಶ್ವವಂದ್ಯ ಮಹಾಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಜಿನಾಗಮೋಕ್ತ ಶಾಸ್ತ್ರದನ್ವಯ ಪೂರ್ವಪರಂಪರೆಯಂತೆ ಶೋಡೋಪಚಾರ ಪೂಜಾ ವಿಧಿ-ವಿಧಾನಗಳು ಭಕ್ತವೃಂದದವರ ಪಾಲ್ಗೊಳ್ಳುವಿಕೆಯಿಂದ ನೆರವೇರಿತು.

ಜೈನ ಧರ್ಮ ಶಾಸ್ತ್ರದನ್ವಯ ನವರಾತ್ರಿಯ ಎಂಟನೇಯ ದಿನವನ್ನು 'ಜೀವದಯಾಷ್ಟಮಿ' ಎಂದು ಆಚರಿಸುವುದರಿಂದ ರಾಗಾದಿ ದ್ವೇಷ ತ್ಯಜಿಸುವಂತೆ ಪರಸ್ಪರ ವಾತ್ಸಲ್ಯಮಯಿ ಜೀವಕಾರುಣ್ಯಭಾವ ರೂಢಿಸಿಕೊಳ್ಳಲೆಂಬ ಸಂದೇಶವಿದೆ. ಜಗತ್ತಿನ ಎಲ್ಲ ಪ್ರಾಣಿ, ಪಕ್ಷಿ, ಸಸ್ಯ ಪ್ರಭೇದಗಳಲ್ಲಿಯೂ ಜೀವವಿರುವುದರಿಂದ ವಿನಾಕಾರಣ ಘಾಸಿಗೊಳಿಸಬಾರದು ಮತ್ತು ಸರ್ವ ಜೀವರಾಶಿಗಳ ಬಗ್ಗೆ ಮಮಕಾರವಿದ್ದಿರಬೇಕು. ಅಹಿಂಸಾಭಾವದ ಜೀವ ಜಗತ್ತು ಸುಖ-ಶಾಂತಿಯ ಪರಿಸರದಲ್ಲಿ ಅನ್ಯೋನ್ಯತೆಯಿಂದ ದುಃಖ ಕಷ್ಟ ನಷ್ಟಗಳಿಂದ ದೂರವಿರಬೇಕು ಎಂದು ಬೋಧಿಸಿ, ಆಶೀರ್ವದಿಸಿದರು.

**ಹೊಂಬುಜ (ಅ. 11) :** ಪೂರ್ವಪರಂಪರೆ ಯಂತೆ ಜಿನಾಗಮೋಕ್ತ ಪೂಜಾ ವಿಧಿ-ವಿಧಾನದಲ್ಲಿ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರು ಸಾನಿಧ್ಯ, ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಶೋಡೋಪಚಾರ ಪೂಜೆ, ಸ್ವರ್ಣಾಲಂಕಾರದಿಂದ ಶೋಭಿಸಿದ ಅಭೀಷ್ಟವರಪ್ರದಾಯಿನಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಭಕ್ತಿ, ಶ್ರದ್ಧೆಗಳಿಂದ ಊರ ಪರವೂರ ಭಕ್ತರು ಪ್ರಾರ್ಥನೆ, ಕಾಣಿಕೆಯನ್ನು ಸಮರ್ಪಿಸಿದರು. ಆರ್ಯಿಕಾರತ್ನ ಶ್ರೀ 105 ಶಿವಮತಿ ಮಾತಾಜಿಯವರು ಉಪಸ್ಥಿತರಿದ್ದರು.

ಶರನ್ನವರಾತ್ರಿಯ ನವಮಿಯಂದು ಇಷ್ಟಾರ್ಥ ಪೂಜೆ ಸಲ್ಲಿಸಿ ಭಕ್ತರು ತಮ್ಮ ಜೀವನ ಪರ್ಯಂತ ಆರೋಗ್ಯ-ಶಾಂತಿ-ನೆಮ್ಮದಿ ಲಭಿಸಲೆಂದು ಯಾಚಿಸುತ್ತಾರೆ. ಮಹಾನವಮಿಯ ಸುದಿನದಂದು ನವವಿಧ ಭಕ್ತಿಯಿಂದ ಬಿನ್ನವಿಸಿಕೊಳ್ಳುವ ಪ್ರಾರ್ಥನೆಯು ಫಲ ನೀಡಲಿ ಎಂದು ಶ್ರೀಗಳವರು ಪ್ರವಚನದಲ್ಲಿ ತಿಳಿಸಿದರು. ಸದಾಕಾಲ ಸರ್ವರಿಗೂ ಕ್ಷೇಮವನ್ನುಂಟು ಮಾಡಲಿ ಎಂದು ಹರಸಿ, ಆಶೀರ್ವದಿಸಿದರು.

# ಶ್ರೀ ಕ್ಷೇತ್ರ ಹೊಂಬುಜದಲ್ಲಿ ನವರಾತ್ರಿ ಸಂಭ್ರಮ













WWW.HOMBUJAPADMAVATI.ORG

## ಶ್ರೀ ಅನಂತನಾಥ ನೋಂಪಿ ಪೂಜಾ ಸಂಗ್ರಹ ಶಾಸ್ತ್ರಗ್ರಂಥ ಲೋಕಾರ್ಪಣೆ




**ದಾವಣಗೆರೆ :** ಇಲ್ಲಿಯ ಶ್ರೀ ಮಹಾವೀರ ಸಂಘ (ರಿ.) ಸಮಸ್ತ ದಿಗಂಬರ ಜೈನ ಸಮಾಜದ ವತಿಯಿಂದ ಶ್ರೀ ಅನಂತನಾಥ ನೋಂಪಿ ಪೂಜಾ ಸಂಗ್ರಹ (ಉದ್ಯಾಪನೆ ವಿಧಿ ವಿಧಾನ ಸಹಿತ) ಶಾಸ್ತ್ರಗ್ರಂಥಗಳ ಲೋಕಾರ್ಪಣೆ ಕಾರ್ಯಕ್ರಮವು ಸೆ. 15ರ ಭಾನುವಾರದಂದು ಇಲ್ಲಿಯ ವಿದ್ಯಾನಗರದ ಕುವೆಂಪು ಕನ್ನಡ ಭವನದಲ್ಲಿ ಹೊಂಬುಜದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ, ಸೋಂದಾ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿ ಹಾಗೂ ವರೂರು ನವಗ್ರಹ ತೀರ್ಥಕ್ಷೇತ್ರದ ಪರಮಪೂಜ್ಯ ಸ್ವಸ್ತಿಶ್ರೀ ಧರ್ಮಸೇನ ಭಟ್ಟಾರಕ ಮಹಾಸ್ವಾಮೀಜಿಯವರ ಪಾವನ ಸಾನಿಧ್ಯ ಮತ್ತು ಮಾರ್ಗದರ್ಶನದಲ್ಲಿ ನೆರವೇರಿತು.

ಅಂದು ಮಧ್ಯಾಹ್ನ 12-15ರಿಂದ ಭಗವಾನ ಶ್ರೀ 1008 ಕಲ್ಪದ್ರುಮ ಆದಿನಾಥ ಜಿನಮಂದಿರದಿಂದ ಶಾಸ್ತ್ರವನ್ನು ಪಲ್ಲಕ್ಕಿಯಲ್ಲಿ ಶೋಭಾಯಾತ್ರೆ ಮೂಲಕ ಮೆರವಣಿಗೆ ಮೂಲಕ ಕಾರ್ಯಕ್ರಮದ ಸ್ಥಳಕ್ಕೆ ಬರಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಸುನೀಲ್ ಕುಮಾರ್ ಡಿ. ವಹಿಸಿದ್ದರು. ಶ್ರೀಮತಿ ಪ್ರಸನ್ನ ಕುಮಾರಿ ಬಿ.ಸಿ. ಪ್ರಾರ್ಥಿಸಿದರು. ಶ್ರೀ ಪ್ರೀತಮ್ ದುಂಡಸಿ ಸ್ವಾಗತಿಸಿದರು. ಶ್ರೀ ಚಂದ್ರಪ್ರಭ ಬಿ. ರವರು ಪ್ರಸ್ತಾವಿಕ ನುಡಿಗಳನ್ನಾಡಿದರು. ಶ್ರೀ ಪ್ರಶಾಂತ್‌ಕುಮಾರ್ ಜೈನ್ ಎಂ.ಪಿ. ವಂದಿಸಿದರು. ಶ್ರೀಮತಿ ಪದ್ಮಾಸುರೇಶ್ ಕಾರ್ಯಕ್ರಮವನ್ನು ನಿರೂಪಿಸಿದರು.

ಗುರುದೇವ

GURUDEVA MONTHLY

RNI No. 13248/57-POSTEL REGD No. KA/SK/SMG 198/2024-26

Date of Posting 17th of every month. Sub Post office, Humcha - 577436

ವಾರ್ಷಿಕ ಚಂದಾ : ರೂಪ್ಾಯ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪ್ಾಯ 1000-00 ಮಾತ್ರ.

ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬

Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math

Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math

Post: Humcha, Tq. Hosanagar., Dist. Shimoga-577436 Ph : 08185-262722